ಮಗಳು ಬೆಳೆದು ಮದುವೆಯಾಗಿ... ಪತ್ನಿ ಕಾಲನ ವಶವಾಗಿ... ಈಗ ಆಲ್ಜೈಮರ್ ಎಂಬ ರೋಗ ಮೆಲ್ಲನೆ ಕಾಲಿರಿಸಿ, ನನ್ನೊಳಗಿನ ನಾನು ಇಲ್ಲದಂತಾಗುವುದರತ್ತ ಸಾಗುತ್ತಿರುವ ಮುನ್ಸೂಚನೆ ವೇಳೆಯಲ್ಲಿ ಜೋತಯ್ಯ ಹಾಗೂ ಅವನ ಬಿದಿರು ಬುಟ್ಟಿ ನೆನಪಾಗಿ ಬಿಟ್ಟಿದೆ!

ಅದೊಂದು ದಿವಸ ಬಹಳ ದುಃಖದಲ್ಲಿದ್ದ ನನ್ನ ಕಂಡು, "ಅಪ್ಪ ಯಾಕಿಷ್ಟು ಚಿಂತೆ ಮಾಡ್ತಿ? ಡಾಕ್ಟ್ರು ಕೈಮೀರಿ ಹೋಗಿಲ್ಲ ಅಂತ ಹೇಳಿದ್ದಾರಲ್ಲ. ಜಸ್ಟ್ ಇನೀಶಿಯಲ್ ಸಿಂಪ್ಟಮ್ಸ್ ಅಷ್ಟೇ ಕಂಡಿದೆಯಂತೆ... ಮೆಡಿಸಿನ್ ಮೂಲಕ, ಹೊಸ ಚಿಕಿತ್ಸೆಗಳ ಮೂಲಕ ಅದನ್ನ ಇಲ್ಲೇ ಸಪ್ರೆಸ್ ಮಾಡ್ಬಹುದಂತೆ" ಎಂದು ಮಗಳು ಶಾರ್ವರಿ ಪರಿಪರಿಯಾಗಿ ಸಮಾಧಾನಿಸಿದ್ದಳು. ತನಗಿಷ್ಟವೆಂದು ಹೊತ್ತು ತಂದಿದ್ದ ಅನೇಕ ಗಝಲ್ ಸಿ.ಡಿ.ಗಳನ್ನು ಕೊಟ್ಟು ಕೇಳಲು ಹೇಳಿದ್ದಳು. ಆದರೆ ಯಾವ ಧೈರ್ಯದ ಮಾತುಗಳೂ ದಿನೇದಿನೇ ಕುಸಿಯುವ ನನ್ನೊಳಗಿನ ಕಸುವನ್ನು ಎತ್ತಲು ಅಸಮರ್ಥವಾಗಿದ್ದವು. ಆಕೆ ಹೊರಡುವ ಹಿಂದಿನ ದಿವಸ,

"ಶಾರ್ವರಿ ಬದ್ಕೋಕೆ ಹೇಗೆ ಆಕ್ಸಿಜನ್ ಈ ದೇಹಕ್ಕೆ ಬೇಕೋ, ಹಾಗೇ ಮನ್ಸಿಗೆ ನೆನಪುಗಳೇ ಮುಖ್ಯ ನೋಡು! ನಾನೇನಾದ್ರೂ ನಾಳೆ ಎಲ್ಲವನ್ನೂ ಮರ್ತು ಹೋದ್ರೆ ಬರೀ ಉಸಿರಾಡ್ತಾ ಇರೋದ್ರಿಂದ ಏನು ಬಂತು ಭಾಗ್ಯ? ನಂಗೆ ಸಾವಂದ್ರೆ ವಿಪರೀತ ಭಯವಿತ್ತು... ಈಗ್ಲೂ ಇದೆ! ನಾನು ಹೋಗ್ಬಿಟ್ರೆ ನಾನೇ ಇರೋದಿಲ್ಲ... ಈ ಜಗತ್ತೂ ಕಾಣ್ಸೋದಿಲ್ಲ... ಏನೂ, ಗೊತ್ತಾಗಲ್ಲ... ಹೀಗೆಲ್ಲಾ ಅನ್ನಿಸಿ ಉದ್ವಿಗ್ನ ಆಗ್ತಿರ್ತೀನಿ. ನಿನ್ನ ಹಾಗೂ ಪುಟ್ಟನ ನೋಡೋಕಾಗೋದೇ ಇಲ್ವಲ್ಲ ಅನ್ನಿಸಿ ಭಯವಾಗ್ತಿರ್ತದೆ. ಬದುಕಿನ ಜೊತೆ ಮೋಹವಾಗ್ಬಿಟ್ಟಿದೆ ನಂಗೆ. ಆದ್ರೆ ನೋಡು ಈಗ... ನಾ ಬದ್ಕಿದ್ರೂ ಸತ್ತಂತೇ ಇರೋ ಸ್ಥಿತಿ ಬರ್ಬಹುದು ಅಂದ್ಬಿಟ್ಟಿದ್ದಾರೆ. ಭಯ ಆಗ್ತಿದೆ ನಂಗೆ..." ಎಂದು ಪುಟ್ಟ ಹುಡುಗನಂತೇ ಬಿಕ್ಕಿದವನನ್ನು ತಾಯಿಯಂತೇ ಸಂತೈಸಿದ್ದಳು!

ಆದರೆ ಎಷ್ಟೇ ಕುಸಿದರೂ, ನಾನು ಪೂರ್ತಿ ನೆಲಕಚ್ಚದಂತೆ ನನ್ನ ಹಿಡಿದಿಟ್ಟಿದ್ದು, ಸಾಯುವ ಹುಚ್ಚು ಮನಸ್ಸು ಮಾಡಿ ಅಂದು ಕಡಲಿನತ್ತ ಸಾಗಿದವನನ್ನು ಹಿಂದೆಳೆದು ತಂದಿದ್ದು ಸುಪ್ತವಾಗಿ ನನ್ನೊಳಗೆ ತಳವೂರಿಬಿಟ್ಟಿರುವ ಈ ಜೋತಯ್ಯನೇ. "ಅನಂತಪ್ಪ... ಎಂದೋ ಬರೋ ಸಾವಿಗೆ ಹೆದ್ರಿ ಇಂದೇ ಬದ್ಕೋದ್ಯಾಕ್ಬಿಟ್ರಿ? ನಿಮ್ಗೊಂದು ಬಿದ್ರಿನ ಬುಟ್ಟಿ ಮಾಡ್ಕೊಡೋಕೆ ಯಾವ ನಾಗಜ್ಜನೂ ಸಿಗ್ಲಿಲ್ವೇ? ನೀವೇ ಒಂದ್ ಬುಟ್ಟಿ ಮಾಡ್ಕಂಡು ಅದ್ರೊಳ್ಗೆ ಕುಂತು ಮೊದ್ಲು ಪ್ರಪಂಚ ಸುತ್ಕಂಡ್ ಬನ್ನಿ" ಎಂದು ಗಾಳಿಯಲ್ಲಿ ಜೋತಾಡುತ್ತಾ ನನ್ನ ದೂಕುತ್ತಿರುವಂತೆ ಭಾಸವಾಗ್ತಿದೆ! ಅವನ ಬೆನ್ನ ಹಿಂದಿನ ಬಿದಿರ ಬುಟ್ಟಿಯಿಂದಿಣುಕುತ್ತಿದ್ದ ತುಂಬು ಬದುಕಿನ ಪ್ರೀತಿ ಕಣ್ಮುಂದೆ ಕುಣಿಯುತ್ತಿದೆ. ಅವನ ನೆನಪಿನ ಗುಂಗಲ್ಲೇ ಯಾವುದೋ ಒಂದು ಗಝಲ್ ಸಿ.ಡಿ.ಯನ್ನು ಹಚ್ಚಿ, ಹಾಗೇ ಕಣ್ಮುಚ್ಚಿ ಒರಗಿದೆ. ಅದರಿಂದ ಹಾಡೊಂದು ಹೊರಮ್ಮುತೊಡಗಿತು 'ಕುಛ್ ರಿಶ್ತೋ ಮೆ ಮುನಾಫಾ ನಹಿ ಹೋತಾ ಪರ್ ಝಿಂದಗೀ ಕೋ ಅಮೀರ್ ಬನಾದೇತಾ ಹೈ'


**ತೇಜಸ್ವಿನಿ ಹೆಗಡೆ**

ಮೂಲತಃ ಶಿರಸಿಯವರು; ಹುಟ್ಟಿ ಬೆಳೆದಿದ್ದು ಮಂಗಳೂರಿನಲ್ಲಿ. ಪ್ರಸ್ತುತ ಬೆಂಗಳೂರಿನಲ್ಲಿ ವಾಸ. 'ಚಿಗುರು', 'ಪ್ರತಿಬಿಂಬ' (ಕವನ ಸಂಕಲನಗಳು), 'ಕಾಣ್ಕೆ', 'ಸಂಹಿತಾ' (ಕಥಾಸಂಕಲನಗಳು), 'ಹೊರಳುದಾರಿ', 'ಹಂಸಯಾನ' (ಕಾದಂಬರಿಗಳು), ಜೊತೆಗೆ ವ್ಯಕ್ತಿಚಿತ್ರಮಾಲಿಕೆ ಮತ್ತು ಅಂಕಣ ಬರಹಗಳ ಪುಸ್ತಕಗಳು ಪ್ರಕಟವಾಗಿವೆ.